ಅಫಿಷಿಯೇಟಿಂಗ್ ರಿಜಿಸ್ಟ್ರಾರ ಆಫೀಸ್.

ದಸ್ತಾವೇಜಿನ ನಂಬರು.	ದಸ್ತಾವೇಜಿನ ಮತ್ತು ಬಕ್ಕ ನಂಬರು.	ಕಕ್ಷಿಗಾರರು. ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ತವಸೀಲ್.	ದಸ್ತಾವೇಜು ಬರಿಸಿ ಕೊಂಡವನ ಹೆಸರು ಯಾ ತವಸೀಲ್.	ದಸ್ತಾವೇಜಿನ ತಾರೀಖು.	ರಜಿಸ್ಟ್ರಿ ಬಗ್ಗೆ ಹಾಜರಾದ ತಾರೀಖು.	ರಜಿಸ್ಟ್ರಿ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಬದಲಿಂಗನೇಟಿ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸ್.	86-87ನೇ ಇಸವಿ 2ನೇ ಬುಕ್ಕು ನಂ. 2	ಅಂಕಿತಟ್ಟಿಹಳ್ಳಿ ವಾಣಿಕ್ಯ ಗೌಡನಮಗ ಮೈಲೇಗೌಡ	ತಿಮ್ಮಸಂದ್ರದ ಶಾನುಭಾಗ ಗುಂಡಪ್ಪ	..	85ನೇ ಇಸವಿ ಜನವರಿ 12	86ನೇ ಇಸವಿ ಆಗಸ್ಟು 7	ಬೇತಮಂಗಲದ ಹೋಬಳಿಗೊಲ್ಲಹಳ್ಳಿ ಕೆರೆಕೆಳಗಿನ ತರೀ ಜಮ್ಮಾ 237–244–246ನೇ ನಂಬರು ಬಗೆ ಆಧಾರ ವರಾಡಿ (250) ರೂಪಾಯಿಗಳು ತೆಗದುಕೊಂಡು ಇಧೇನೆಂದು
	86-87ನೇ ಇಸವಿ 2ನೇ ಬುಕ್ಕು ನಂ. 1	ಸೂಲಿಕುಂಟೆ ಶ್ರೀನಿವಾಸಾಚಾರ್ರು	ವಕ್ಕಲೇರಿಯಲ್ಲಿರುವ ಚೆರವೆಲು ನಾಗಪ್ಪನಮಗವರದಪ್ಪ	..	7–5–86	6—6—87	ಸೂಲಿಕುಂಟೆ ಗ್ರಾಮದ ಬಳಿ ಯಿರುವ ತೋಪಿನ ಹುಣಸೆಮರಗಳ ಫಸಲನಲ್ಲಿಮೂರಲ್ಲಿ ಬಂದು ಹಿಕ್ಕೆ (40) ರೂಪಾಯಿನ ಬಡ್ಡಿಗಾಗಿ ಭೋಗ್ಯಮಾಡಿರುತ್ತೆಂದು ವಗೈರೆ

ಅಬ್ದುಲ್‌ರಹಿಮಾ,
ಅಫಿಷಿಯೇಟಿಂಗ್ ರಿಜಿಸ್ಟ್ರಾರ.

ಸಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಪ್ರಕರಣದ ಮೇರಿಗೆ.

ಇಸ್ತಿಹಾರನಾಮೆ.

ಬೆಂಗಳೂರು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ 1888ನೇ ಇಸವಿ ಅರಿಜಿನಲ್ ವ್ಯಾಜ್ಯದ ನಂಬರ್ 1580.

ವಾದಿ.
ದೇಶಕುಲಕರ್ಣಿಕೆ ಸುಬ್ಬರಾಯಪ್ಪ ಮಾಲೂರು ತಾಲ್ಲೂಕು ನರಸಾಪುರ.

ಪ್ರತಿವಾದಿಗಳು.
1 ಮುಳಬಾಗಲು ಶ್ರೀಪಾದರಾಮರ ಮಠದ ಸ್ವಾಮಿಗಳಾದ ಸುಜ್ಞಾನನಿಧಿಗಳು.
2 ಸದರೀ ಮಠದ ಚಿಕ್ಕ ಸ್ವಾಮಿಗಳಾದ ಸುಧಿನಿಧಿಗಳು.
3 ಹೆಬ್ಬಣಿ ಕೇಷವಾಚಾರ್ರು.

ಇದರಿಂದ ಮಾಲೂರ್ ತಾಲ್ಲೂಕು ನರಸಾಪುರದಲ್ಲಿ ಇರುವ ಮೇಲ್ಕಂಡ ವಾದಿಯ ಸ್ವಕೀಯರಾದ ವಿಜಾಪುರದ ತಂಬಿಗೆಳಿಗೆ ತಿಳಿಯಪಡಿಸುವದೇನಂದರೆ, ಮೇಲ್ಕಂಡ ವ್ಯಾಜ್ಯದಲ್ಲಿ ವಾದಿಯು ಪ್ರತಿವಾದಿಗಳ ಮೇಲೆ ಮಾಡಿ ಇರುವ ದಾವಾದಲ್ಲಿ ವಾದಿಗಳಾಗಿ ಶೀರಿ ವ್ಯವಹಾರ ನಡಿಸಲು ಇಚ್ಛೈಯುಳ್ಳವರು ಯಿಲ್ಲರೂ 1889ನೇ ಇಸವಿ ಫಿಬ್ರವರಿ 14ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗತಕ್ಕ ಬಗ್ಗೆ ಇದರಿಂದ ಸಕಲರಿಗೂ ತಿಳಿಯಪಡಿಸಿ ಇರುತ್ತೆ.

ಎತಾರೀಖು 18ನೇ ಮಾಹೆ ಡಿಸಂಬರ್ ಸ್ 1888ನೇ ಇಸವಿ.

ಸಿ. ಕ್ರೈಸ್,
ಸಬ್ ಜಡ್ಜಿ.

ಹಾಸನ ಡಿಸ್ಟ್ರಿಕ್ಟ್.

ತಾರೀಖು 17ನೇ ಡಿಸಂಬರ್ 1888ನೇ ಇಸವಿ.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಮಂಜೆರಾಬಾದ್ ತಾಲ್ಲೂಕಿನ ಈ ಕೆಳಗೆ ನಮೂದಾಗಲ್ಪಡುವ ಜಮ್ಮಾ ಕಾಫಿ ಸಾಗುವಳಿಗೋಸ್ಕರ ಇದರ ಕೆಳಗಿನ ಸ್ಪೇಶೆಮೆಂಟಿನ ಷರತು ಶಾಲಂನಲ್ಲಿ ನಮೂದಾಗುವ ತಾರೀಖು ಮತ್ತು ಸ್ಥಳದಲ್ಲಿ ಮಂಜೆರಾಬಾದ್ ತಾಲ್ಲೂಕು ಆಮಲ್‌ದಾರ್‌ರವರ ರೂಬರೂ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಹರಾಜು ಮಾಡಿಸಲ್ಪಡುವದು.

2. ಈ ಹರಾಜ್ ಬಹಿರಂಗವಾಗಿ ದನ್ನೂರು ಷರತ್ತು ಅನುಸರಿಸಿ ಗೊತ್ತಾಗಲ್ಪಟ್ಟ ಎಕರೆಗೆ ಹತ್ತು ರೂಪಾಯಿಗಳ ಮೇಲೆ ಚಡ ದರಖಾಸ್ತು ಮಾಡುವವರ ಹೆಸರಿಗೆ ಖೈರು ಮಾಡಲ್ಪಡುವದು. ದರಖಾಸ್ತುದಾರನಿಂದ ಹಾಜರ್ಮಾಡಲ್ಪಟ್ಟು ಗೊತ್ತಾಗಲ್ಪಟ್ಟ ಖರೀದಿಯ ನಾಲ್ಕರಲ್ಲಿ ಒಂದು ಭಾಗದ ಡಿಪಾಜಿಟ್ ಹಣವು ದರಖಾಸ್ತುದಾರನ ಹೆಸರಿಗೆ ಹರಾಜ್ ನಿಂತ ಪಕ್ಷ ಅವನು ಈ ನೋಟಿಸ್ 4ನೇ ಕ್ಲಾಜ್ ನೇರಿಗೆ ಕೊಡಬೇಕಾದ ಕೇಕಷಾ 25 ರೂಪಾಯಿ ಹರಾಜ್ ಹಣದ ಡಿಪಾಜಿಟ್ಟಿಗೆ ವಜಾ ಮಾಡಲ್ಪಡುವದು ಮತ್ತು ಇತರರು ಚಡದರ ಖಾಸ್ತು ಮಾಡಿ ಅವರಿಗೇನೇ ನಿಂತ ಪಕ್ಷ ದರಖಾಸ್ತುದಾರನ ಠೇವಣಿಯು ವಾಪಸ್ ಮಾಡಲ್ಪಡುವದು.

3. ಗೊತ್ತಾಗಲ್ಪಟ್ಟ ಖರೀದಿಯು ಸರ್ವೇ ಖರ್ಚನ್ನು ಅಡಗಿಸಿಕೊಂಡಿರುತ್ತಲ್ಲದೆ ಸಂದಲ್ ವಿನಹ ವುಳಿಸಿಕೊಳ್ಳಲ್ಪಟ್ಟ ಜಾತಿ ಯಲ್ಲಾವುದರಗಳ ಗವರ್ಮೆಂಟ್ ಹಕ್ಕನ್ನು ಕೇರಿಸಿಕೊಂಡಿರುತ್ತೆ ಸಂದಲ್ ಯಾವಾಗ್ಯೂ ಸರಕಾರದ ಹಕ್ಕಿನದೇ ಆಗಿರುತ್ತೆ.

4. ಚಡದರಖಾಸ್ತುದಾರನು ಹರಾಜ್ ಕೈದಾದ ಒಡನೆಯೇ ಕೇಕಷಾ 25 ರೂಪಾಯಿಗಳ ಮೇರೆ ಕೊಡಬೇಕಲ್ಲದೆ ಬಾಕಿ ಹಣವನ್ನು ಜಾರೀಲಿ ಇರುವ ರೂಲ್ಸ್ ಅನುಸರಿಸಿ ಹರಾಜ್ ಆದ ತಾರೀಖು ಲಾಗಾಯತು 15ನೇ ತಾರೀಖಿನ ದಿವಸದ ಸೂರ್ಯಾಸ್ತಮಯದೊಳಗೆ ಕೊಡಬೇಕು ಹಾಗೆ ಕೊಡದೆ ತಪ್ಪಿದಲ್ಲಿ ಡಿಪಾಜಿಟ್ ಇಟ್ಟು ಮೊಬಲಗು ರಂಡವಾಗಿ ತೆಗದುಕೊಳ್ಳುವದಲ್ಲದೆ ಹರಾಜಿನಲ್ಲಿ ತೆಗದುಕೊಂಡವನ ಅವಗುಣಕ್ಕಾಗಿ ವುನ್ನೆ ಹರಾಜ್ ಮಾಡಿಸಲ್ಪಡುವದು. 2ನೇ ಹರಾಜಿನಲ್ಲಿ ಕಮ್ಮಿಯಾಗುವ ಹಣವನ್ನು ಮೊದಲು ಹರಾಜ್‌ದಾರನಿಂದ ವಸೂಲ್ಮಾಡಲ್ಪಡುತ್ತೆ.

5. ಈ ರೂಲ್ಸ್ ಅನುಸರಿಸಿ ಹರಾಜ್ ಮಾಡಲ್ಪಟ್ಟ ಜಮೀನು 3 ವರುಷ ಮುಫತ್ತು ಆಗಿಯೂ ನಂತರ, 2 ವರುಷ ಅರ್ಧ ಕಂದಾಯಕ್ಕೂ 6ನೇ ವರುಷದಿಂದ ಪೂರಾ ಕಂದಾಯಕ್ಕೂ ಕೊಡಲ್ಪಡುವದು ಈ ರಿಯಾಯತಿಯನ್ನು ತೋರಿಸುವದಕ್ಕೆ ಮುಂಚೆ ಚಡದರ ಖಾಸ್ತುದಾರನು ಸದರೀ ಜಮೀನಿನಲ್ಲಿ ಇರತಕ್ಕ ಸಾಗುವಳಿ ಲಾಯಬ ಪ್ರದೇಶವನ್ನು ನಿಜವಾಗಿಯೂ ಗಿಡ ಹಾಕುವದಕ್ಕೆ ಯತ್ನಪಡದೆ ಆಡವಿಯನ್ನು ತೆಗದು ಮರಗಳನ್ನು ಕಡಿದು ರಾಜೀನಾಮೆ ಕೊಟ್ಟಲ್ಲದೇ ಆದರೆ ಮೊದಲು ವರುಷದ ಲಾಗಾಯತು ಪೂರಾ ಕಂದಾಯವನ್ನು ಸರಕಾರಕ್ಕೆ ಕೊಡಲು ಬದ್ಧನಾಗಿ ಮುಚ್ಚಳಿಕೆ ಬರದು ಕೊಡಬೇಕು.

ಸರ್ವೇ ನಂಬರು.	ದರಖಾಸ್ತುದಾರನ ಹೆಸರು.	ಜಮೀನು ಇರತಕ್ಕ ಗ್ರಾಮದ ಹೆಸರು.	ಚೆಕ್ಕುಬಂದಿ.	ದರಖಾಸ್ತು ಜಮೀನಿನ ವಿಸ್ತೀರ್ಣ.			ಷರಾ.
				ಎಕರೆ.	ಗುಂಟೆ.	ಆಕಾರ.	
7	ಮೆ॥ ಜೇಮ್ಸ್ ಹಂಟ್ ಸಾಹೆಬರು.	ಮಂಜರಾಬಾದ್ ತಾ॥ ಹೊಸಕೋಟೆ ಹೊ॥ ಹೈರೂರು ಗ್ರಾಮ.	ಪೂರ್ವಕ್ಕೆ ಮುತ್ತಿಗೆ ಗ್ರಾಮದ ಗಡಿ, ಪಶ್ಚಿಮಕ್ಕೆ ಸರ್ವೆ ನಂಬರ್ 5-6 ಮತ್ತು 1ನೇ ಜರ್ಮೀ, ದಕ್ಷಿಣಕ್ಕೆ ಸರ್ವೆ 5ನೇ ನಂಬರ್ ಮತ್ತು ಮುತ್ತಿಗೆ ಗಡಿ, ಉತ್ತರಕ್ಕೆ ಸರ್ವೆ 23-22-9. 8 ಈ ನಂಬರ್ ಜರ್ಮೀಗಳು.	46	7	ಹಂಗಾಮಿ ದರ 1 ರೂಪಾಯಿ ಖಾಯಂದರ 1-8 ರೂಪಾಯಿ ಪ್ರಕಾರ.	1889ನೇ ಇಸವಿ ಫಿಬ್ರವರಿ 25ನ್ನು ಸಂಜೆಪುರಾಬಾದ್ ತಾಲ್ಲೂಕು ಕಛೇರಿಯಲ್ಲಿ ಹರಾಜ್ ಮಾಡಲ್ಪಡುವದು.
12	ಡಿಟೋ	ಡಿಟೋ	ಪೂರ್ವಕ್ಕೆ ಮಲಗಳಲಿ ಗ್ರಾಮದ ಗಡಿ ಪಶ್ಚಿಮಕ್ಕೆ ಸರ್ವೆ 19 18 13ನೇ ನಂಬರ್ ಜರ್ಮೀ, ದಕ್ಷಿಣ ಹಳ್ಳ ಮತ್ತು 11 19ನೇ ನಂಬರ್ ಜಮೀನುಗಳು ಉತ್ತರಕ್ಕೆ ಸರ್ವೆ 89ನೇ ನಂ. ಜರ್ಮೀ ಮತ್ತು ಮಲಗಳಲಿ ಗ್ರಾಮದ ಗಡಿ.	85	22	ಡಿಟೋ ಮೇರೆ	

ಪಿ. ಎಸ್. ಪೂರ್ಣಯ್ಯ,
ಡೆಪ್ಯುಟಿ ಕಮ್ಮಿಷನರ್.

ನೋಟೀಸ್.

ತಾರೀಖು 25ನೇ ಅಕ್ಟೋಬರ್ 1888.

ಸ॥1889ನೇ ಜನವರೀ ತಾರೀಖು 10ರಲ್ಲು ಪ್ರೇಜರ್‌ಪೇಟೇಲಿ 55 ಟ್ಯೂ ಗಂಧವು ಹರಾಜು ಹಾಕಲ್ಪಡುತ್ತದೆ.

ಷರತ್—ಸ॥ 1885ನೇ ಇಸವಿ ಜನವರಿ ತಾರೀಖು 3—ನಂ. 1ರ ಕೊಡಗು ಡಿಸ್ಟ್ರಿಕ್ಟ್ ಗೆಜೆಟ್ಟಿನಲ್ಲಿ ಘೋಷಿಸ್ ಮಾಡೋಣಾದ ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರ ಸ॥ 1881ನೇ ಇಸವಿ ಫಿಬ್ರವರೀ ತಾರೀಖು 15 ನಂಬರ್ 26ರ್ನ ನೋಟಿಫಿಕೇಷನ್ ಮೇರೆ ಗಂಧದ ಕ್ರಯವನ್ನ ಸಾಕಲ್ಯವಾಗಿ 1889ನೇ ಮಾರ್ಚೀ ತಾರೀಖು 25ರ ವಳಗೆ ಖಜಾನೆಗೆ ಪಾವತೀ ಮಾಡತಕ್ಕದ್ದು.

ಯಫ್. ಬಿ. ಡಿಕ್ಕಿನ್ಸನ್,
ಡೆಪ್ಯುಟಿ ಕನಸರವೇಟರ್ ಆಫ್ ಫಾರೆಸ್ಟ್ಸ್.